ವಿವೇಚನಾ ಕೋಟಾದಡಿ ನಿಗದಿಪಡಿಸಿರುವ ನಿವೇಶನಗಳು

149 (392) ಶ್ರೀ ಸುರೇಶ್ ಗೌಡ (ನಾಗಮಂಗಲ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದ ಕೆರೆ ಅಂಗಳದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ನಿರ್ಮಿಸಲಾದ ನಿವೇಶನಗಳು ಎಷ್ಟು; ಇದರಲ್ಲಿ, ಮಂಡಳಿಯ ವಿವೇಚನಾ ಕೋಟಾದಡಿ ನಿಗದಿಪಡಿಸಿದ ನಿವೇಶನಗಳು ಎಷ್ಟು;

ಆ) ಮಂಡಳಿ ವಿವೇಚನಾ ಕೋಟಾದಡಿ ನಿವೇಶನ ಹಂಚಿಕೆ ಪಡೆದ ಫಲಾನುಭವಿಗಳೆಷ್ಟು; (ವಿವರ ಒದಗಿಸುವುದು)

ಇ) ಈ ನಿವೇಶನಗಳನ್ನು ಫಲಾನುಭವಿಗಳು ಪಡೆಯಲು ಅವರು ಜಿಲ್ಲೆಯಲ್ಲಿ ಸಲ್ಲಿಸಿದ ಸೇವೆ ಏನು; (ವಿವರ ಒದಗಿಸುವುದು)?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಮಂಡ್ಯ ನಗರದ ಕೆರೆ ಅಂಗಳದಲ್ಲಿ ಒಟ್ಟು 1364 ನಿವೇಶನಗಳನ್ನು ನಿರ್ಮಿಸಲಾಗಿದೆ. ಈ ಬಡಾವಣೆಯಲ್ಲಿ ನಿರ್ಮಿಸಲಾಗಿರುವ ನಿವೇಶನಗಳಿಗೆ ಸಾರ್ವಜನಿಕರಿಂದ ಬೇಡಿಕೆ ಬಾರದೆ ಇದ್ದ ಕಾರಣ ವಿವೇಚನಾ ಕೋಟಾದಡಿಯಲ್ಲಿ ನಿವೇಶನಗಳನ್ನು ಕಾಯ್ದಿರಿಸಿರುವುದಿಲ್ಲ.

ಆ) ಮತ್ತು ಇ) ಉದ್ಭವಿಸುವುದಿಲ್ಲ.

ನೆರೆ ಸಂತ್ರಸ್ಥರಿಗಾಗಿ ರಚಿಸಲಾದ ಮನೆಗಳ ವಿವರ

151 (189) ಶ್ರೀ ವಸಂತಬಂಗೇರ .ಕೆ (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಮಂದಿ ನೆರೆ ಸಂತ್ರಸ್ಥರನ್ನು ಮನೆ ರಚನೆಗಾಗಿ ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲಾಗಿದೆ;

ಆ) ಈ ಫಲಾನುಭವಿಗಳಲ್ಲಿ ಎಷ್ಟು ಮಂದಿಗೆ ಸರ್ಕಾರದ ನೆರವಿನಿಂದ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಲಾಗಿದೆ;

ಇ) ಈ ಫಲಾನುಭವಿಗಳಲ್ಲಿ ಎಷ್ಟು ಮಂದಿಗೆ ಧಾರ್ಮಿಕ ಸಂಸ್ಥೆಗಳು ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಿದೆ; (ವಿವರಗಳನ್ನು ತಾಲ್ಲೂಕುವಾರು ನೀಡುವುದು) ?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) 59,212 ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಆ) 3723 ಮನೆಗಳು

ಇ) ಧಾರ್ಮಿಕ ಸಂಸ್ಥೆಗಳು ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಿದ ತಾಲ್ಲೂಕುವಾರು ವಿವರ:

ಕ.ಸ.	ಧಾರ್ಮಿಕ ಸಂಸ್ಥೆ	ತಾಲ್ಲೂಕು	ಮನೆಗಳ ಸಂಖ್ಯೆ
1.	ಮಾತಾ ಅಮೃತಾಮಯಿ	ರಾಯಚೂರು	242
2.	ಧರ್ಮಸ್ಥಳ	ನವಲಗುಂದ	250
3.	ಜೆ.ಎಸ್.ಎಸ್. ಮೈಸೂರು	ಹುನಗುಂದ	107
		ಒಟ್ಟು	**599**

ನೆರೆ ಹಾವಳಿ ಸಂತ್ರಸ್ಥರಿಗೆ ರಚಿಸಲಾದ ಮನೆಗಳು

152 (190) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆರೆ ಹಾವಳಿ ಸಂತ್ರಸ್ಥರಿಗಾಗಿ ಎಷ್ಟು ಸಂಖ್ಯೆಯ ಮನೆಗಳನ್ನು ನಿರ್ಮಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಅನುಮತಿ ನೀಡಲಾಗಿದೆ;

ಆ) ನೆರೆ ಹಾವಳಿ ಸಂತ್ರಸ್ಥರಿಗಾಗಿ ಮನೆಗಳನ್ನು ನಿರ್ಮಿಸಲು ಈವರೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಎಷ್ಟು ಅನುದಾನವನ್ನು ಯಾವ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಗೊಳಿಸಲಾಗಿದೆ;

ಇ) ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮವು ನೆರೆಹಾವಳಿ ಸಂತ್ರಸ್ಥರಿಗಾಗಿ ಈವರೆಗೆ ಎಷ್ಟು ಮನೆಗಳ ಕಾಮಗಾರಿಗಳನ್ನು ಪೂರ್ತಿಗೊಳಿಸಿದೆ;

ಈ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿರ್ಮಿಸಿರುವ ಎಷ್ಟು ಮನೆಗಳನ್ನು ನೆರೆ ಹಾವಳಿ ಸಂತ್ರಸ್ಥ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ರಾಜ್ಯ ಸರ್ಕಾರದಿಂದ ನೆರೆ ಹಾವಳಿ ಸಂತ್ರಸ್ಥರಿಗಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ 14850 ಮನೆಗಳನ್ನು ನಿರ್ಮಿಸಲು ಅನುಮತಿ ನೀಡಲಾಗಿದೆ.

ಕೇಂದ್ರ ಸರ್ಕಾರವು ಪ್ರವಾಹ ಪೀಡಿತರಿಗಾಗಿ 2009-10ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ 7437 ಮನೆಗಳ ಗುರಿ ನೀಡಿರುತ್ತದೆ.

ಆ) ನೆರೆ ಹಾವಳಿ ಸಂತ್ರಸ್ಥರಿಗಾಗಿ ಮನೆಗಳನ್ನು ನಿರ್ಮಿಸಲು ಈವರೆಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ರೂ. 145.79 ಕೋಟಿಗಳ ಅನುದಾನವನ್ನು ಕಂದಾಯ ಇಲಾಖೆಯು ಲೆಕ್ಕ ಶೀರ್ಷಿಕೆ